ಠೀವಿಯಿಂದ ಧರ್ಮಾಧ್ಯಕ್ಷರ ಎದುರು ನಿಂತಿದ್ದ. ಫಾದರ್ ಡೇವಿಡ್ ತಮ್ಮ ಕೈಯನ್ನು ಡೇನಿಯಲ್‌ನ ತಲೆಯ ಮೇಲಿಟ್ಟು ಅವನಿಗೆ ಕ್ರೈಸ್ತ ದೀಕ್ಷೆಯನ್ನು ಕೊಡಲಾರಂಭಿಸಿದರು. ಅವನಿಗೆ ಅಭಿಷೇಕ ಮಾಡಲಾಯಿತು. ಎಲ್ಲರೂ ಮಂತ್ರಮುಗ್ಧರಾಗಿ ನೋಡುತ್ತಿದ್ದರು. ನಾನು ಮೊದಲ ಬಾರಿಗೆ ಡೇನಿಯಲ್ ಪ್ರಾಯಕ್ಕೆ ಬಂದಿರುವುದನ್ನು ಮನಗಂಡೆ.

ಧಾರ್ಮಿಕ ಅನುಷ್ಠಾನಗಳೆಲ್ಲವೂ ಮುಗಿದ ನಂತರ ಎಲ್ಲರೂ ಡೇನಿಯಲ್‌ನನ್ನು ಅಭಿನಂದಿಸಿದರು. ಅವನ ಕೈಗೆ ಉಡುಗೊರೆಗಳನ್ನು ಕೊಟ್ಟು, ಅವನನ್ನು ತಬ್ಬಿಕೊಂಡರು. ಸೇಂಟ್ ಜಾನ್ ಪರಿಷದ್ ಅಧ್ಯಕ್ಷರಾದ ಎಬಿಲ್ ಎಕ್ಸಟ್ರೋಸ್‌ರು ಅತಿಥಿಗಳಿಗೆ, ಈ ಸಮಾರಂಭದಲ್ಲಿ ಡಾಕ್ಟರ್ ವಿಲಿಯಮ್ ಮತ್ತು ಅವರ ಧರ್ಮಪತ್ನಿ ಪ್ರಭು ಏಸುವಿನ ಭವನಕ್ಕೆ ಎರಡು ಸಾವಿರ ಪೌಂಡ್ ಹಣವನ್ನು ದಾನ ಕೊಟ್ಟಿದ್ದಾರೆ ಎಂದರು. ಚಪ್ಪಾಳೆಗಳು ಮೊಳಗಿದವು. ಎಬಿಲ್ ಎಕ್ಸಟ್ರೋಸರು ಮುಗುಳ್ನಗುತ್ತಾ ಜನರಿಗೆ ಡೈನಿಂಗ್ ಹಾಲಿಗೆ ಹೋಗುವಂತೆ ಸೂಚಿಸಿದರು; ಅಲ್ಲಿ ದೊಡ್ಡ ಪಾರ್ಟಿಗೆ ಏರ್ಪಾಡು ಮಾಡಲಾಗಿತ್ತು. ಜನ ಪರಸ್ಪರ ಕಲೆತು, ಆಹಾರ ಪಾನೀಯಗಳನ್ನು ಸೇವಿಸಲಾರಂಭಿಸಿದರು. ನೀನಾ ಸಹ ಎಲ್ಲರೊಂದಿಗೆ ಕಲೆತಳು.

'ಈ ಬ್ಲಾಕ್ ಬ್ಯೂಟಿ ಯಾರು?' ಓರ್ವ ಮಹಿಳೆ ಲಾರಾಳಲ್ಲಿ ಪ್ರಶ್ನಿಸುವುದನ್ನು ನಾನು ಕೇಳಿದೆ.

'ವಿಲಿಯಮ್‌ರ ಅಣ್ಣನ ಹೆಂಡತಿ' ಎಂದಳು ಲಾರಾ.

'ಈ ಮಿಲನ ಹೇಗಾಯಿತು?'

'ಇವಳು ಎಡಿನ್‌ಬರ್ಗ್ ಟೂರಿಗೆ ಬಂದಿದ್ದಳು. ಪಾಲ್ ಇವಳ ಟೂರ್ ಗೈಡಾಗಿದ್ದ. ಇಬ್ಬರೂ ಪ್ರೇಮಪಾಶಕ್ಕೆ ಸಿಲುಕಿದರು' ಲಾರಾ ತನ್ನ ಕಣ್ಣುಗಳನ್ನು ಮಿಟುಕಿಸುತ್ತಾ ಹೇಳಿದಳು.

'ಇಂಟರೆಸ್ಟಿಂಗ್! ಅಂದರೆ ಪ್ರೀತಿ ಎಲ್ಲೇ ಆದರೂ ಚಿಗುರಬಲ್ಲದು.'

ನಾವು ಕೋಪನ್‌ಹೇಗನ್‌ಗೆ ಮರಳಿ ಬರುವಾಗ ನೀನಾ ವಿಮಾನದಲ್ಲಿ ಬೇಸರದ ಧ್ವನಿಯಲ್ಲಿ ನನಗೆ ಹೇಳಿದಳು, 'ಸ್ಕಾಟ್, ನೀವು ನನಗೆ ಸರಿಯಾದ ಸಲಹೆಯನ್ನು ಕೊಡುತ್ತಿದ್ದಿರಿ. ನಾನಲ್ಲಿಗೆ ಹೋಗಬಾರದಿತ್ತೆಂದು ಅಲ್ಲಿಗೆ ಹೋದ ನಂತರ ಅನುಭವವಾಯಿತು'.

ಹಿಂದೂ, ಮುಸ್ಲಿಮ್, ಸಿಖ್, ಕ್ರಿಶ್ಚಿಯನ್, ಹೀಗೆ ಯಾವುದೇ ಜನಾಂಗವಾಗುವುದು ಮುಖ್ಯವಲ್ಲ. ಮನುಷ್ಯನ ಪರಿಧಿ ಇದಕ್ಕಿಂತ ಹೆಚ್ಚು ವಿಸ್ತೃತವಾಗಿದೆ. ಇದಕ್ಕೊಂದು ತೀಕ್ಷ್ಣ ಉತ್ತರ ನನಗೆ ಕರೀನಾಳಿಂದ ಲಭಿಸಿತು. ನನಗೆ ನೀನಾ ಮತ್ತು ಅವಳ ಪುತ್ರಿಯರು ಪರಸ್ಪರರಲ್ಲಿ ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನು ನೋಡಿ ಆಶ್ಚರ್ಯವಾಗುತ್ತಿತ್ತು. ಅಜ್ಜ ಅಜ್ಜಿ ಮನೆಗೆ ಬಂದಾಗ ತಮಿಳು ಭಾಷೆ ಮಾತನಾಡುವುದು ಕೇಳಿ ಬರುತ್ತಿತ್ತು ಅಥವಾ ನಾವು ಅವರ ಮನೆಗೆ ಹೋದಾಗ ಕೇಳಬಹುದಿತ್ತು. ಡೆನಿಶ್ ಭಾಷೆಯಲ್ಲಿ ಅವರ ಮಾತುಕತೆ ಪ್ಲಂಬರ್, ಬಡಗಿ ಅಥವಾ ಸೂಪರಮಾರ್ಕೆಟ್‌ನ ಅಂಗಡಿದಾರರೊಂದಿಗಷ್ಟೇ ಸೀಮಿತವಾಗಿತ್ತು. ನನಗೆ ಇದರಿಂದ ಅನುಕೂಲವೇ ಆಗಿತ್ತು, ಆದರೂ ನಾನು ಅವರನ್ನು ಕೇಳಿದೆ, 'ನೀವು ನಿಮ್ಮ ನಿಮ್ಮಲ್ಲೇ ಇಂಗ್ಲಿಷ್‌ನಲ್ಲೇಕೆ ಮಾತನಾಡುತ್ತೀರಿ?'

'ಮತ್ತೆ ಯಾರ ಹತ್ರ ಮಾತಾಡಬೇಕು?' ಕರೀನಾ ಗಡಸು ಧ್ವನಿಯಲ್ಲಿ ಕೇಳಿದಳು.

'ನಿಮ್ಮ ಒಂದು ಉತ್ತರಾಧಿಕಾರ ಭಾರತಕ್ಕೆ ಸಂಬಂಧಿಸಿದ್ದಾದರೆ, ಇನ್ನೊಂದು ಡೆನಿಶ್‌ಗೆ ಸಂಬಂಧಿಸಿದೆ. ಡೆನಿಶ್‌ನಲ್ಲಿ ಮಾತನಾಡಿ ಅಥವಾ ನಿಮ್ಮ ಭಾರತದ ಭಾಷೆಯಲ್ಲಿ ಮಾತನಾಡಿ' ನಾನು ತರ್ಕಿಸಿದೆ.

'ಅಮ್ಮ ಇಂಡಿಯನ್, ಅಪ್ಪ ಡೆನಿಶ್, ಮಲತಂದೆ ಸ್ಕಾಟಿಷ್. ವಾಸ್ತವವಾಗಿ ನಾವೇನೆಂದು ನಮಗೇ ಗೊತ್ತಿಲ್ಲ' ಕರೀನಾ ತನ್ನ ಹೆಗಲುಗಳನ್ನು ಕುಣಿಸುತ್ತಾ ಹೇಳಿದಳು. ನಾನು ನಿರುತ್ತರನಾದೆ. ನಾನು ಮೌನವಾಗಿರುವುದನ್ನು ನೋಡಿ ಕರೀನಾ ಹೇಳಿದಳು, 'ಯೂರೋಪಿಯನ್ ಆಗುವುದು, ಇಂಡಿಯನ್ ಆಗುವುದು, ಬ್ಲಾಕ್ ಆಗುವುದು, ವೈಟ್ ಆಗುವುದು... ಎಲ್ಲವೂ ಹಳೆ ಸಂಗತಿಗಳು. ನಮ್ಮ ಇಂದಿನ ಗುರುತೇನೆಂದರೆ, ನಾವು ಪೃಥ್ವಿ ಗ್ರಹದ ನಿವಾಸಿಗಳು.'

ಪ್ರಸ್ತುತ ನನಗೆ ನೀನಾಳ ಇಬ್ಬರು ಘನಿಷ್ಠ ಮತ್ತು ವಿಶ್ವಸನೀಯ ಪ್ರಿಯಜನರು ತುಂಬಾ ಇಷ್ಟವಾದರು. ಅವರೊಂದಿಗೆ ನನ್ನ ಆತ್ಮೀಯತೆ ಸಹ ಬೆಳೆಯಿತು. ಒಬ್ಬ ಅವಳ ಚಿಕ್ಕಪ್ಪನ ಮಗ ನವೀನ; ಅವನು ನೀನಾಗಿಂತ ಎರಡು ವರ್ಷ ಚಿಕ್ಕವನಾಗಿದ್ದು ಹಾಲೆಂಡಿನಲ್ಲಿ ವಾಸಿಸುತ್ತಿದ್ದ; ಅವನು ಡಚ್ ಮಹಿಳೆಯನ್ನು ವಿವಾಹವಾಗಿದ್ದ; ಅವನು ನೀನಾಳೊಂದಿಗೆ ಫೋನ್, ಇಮೇಲ್, ವಾಟ್ಸಾಪ್‌ನಲ್ಲಿ ಸದಾ ಸಂಪರ್ಕದಲ್ಲಿರುತ್ತಿದ್ದ; ಅವಳ ಪ್ರತಿಯೊಂದು ಸಮಾರಂಭದಲ್ಲಿ ಭಾಗಿಯಾಗುತ್ತಿದ್ದ; ನೀನಾ ಅವನನ್ನು ತನ್ನ ತಮ್ಮನೆಂದು ಹೇಳುತ್ತಿದ್ದಳು.

ಇನ್ನೊಬ್ಬ ಆದಿತ್ಯನಾಗಿದ್ದ; ನೀನಾ ಅವನನ್ನು ತನ್ನ ಇಂಡಿಯನ್ ಫ್ರೆಂಡ್ ಎನ್ನುತ್ತಿದ್ದಳು. ನೀನಾ ಮತ್ತು ಆದಿತ್ಯನ ತಂದೆ ತಾಯಿ ಒಂದೇ ಕಾಲದಲ್ಲಿ ಭಾರತದಿಂದ ಡೆನ್ಮಾರ್ಕ್‌ಗೆ ಬಂದು ನೆಲೆಸಿದ್ದರು. ನೀನಾ ಮತ್ತು ಆದಿತ್ಯ ಇಬ್ಬರೂ ಒಂದೇ ವರ್ಷ, ಒಂದೇ ತಿಂಗಳಿನಂದು ಹುಟ್ಟಿದ್ದರು; ನೀನಾ ಹುಟ್ಟಿದ ನಾಲ್ಕು ದಿನಗಳ ಮೊದಲು ಆದಿತ್ಯ ಹುಟ್ಟಿದ್ದ. ನನಗೆ ನೀನಾ ತನ್ನ ಪರಿವಾರದ ಹಳೆಯ ಅಲ್ಬಮ್ ತೋರಿಸಿದ್ದಳು. ಚಿತ್ರಗಳಲ್ಲಿ ಕಳೆದುಹೋದ ಕಾಲ... ಶೀಲಾ ದೇವಿ ಮತ್ತು ಆದಿತ್ಯನ ತಾಯಿ ಸೀಮಾ ಜೋಶಿ ಇಬ್ಬರೂ ತಮ್ಮ ಯೌವನಾವಸ್ಥೆಯಲ್ಲಿರುವ ಫೋಟೊಗಳು... ಇಬ್ಬರೂ ಪ್ರೆಗ್ನೆಂಟ್ ಆಗಿರುವ ಒಂದು ಭಾವಚಿತ್ರವೂ ಇತ್ತು. ಇನ್ನೊಂದು ಫೋಟೊದಲ್ಲಿ ಇಬ್ಬರು ತಮ್ಮ ತಮ್ಮ ಮಕ್ಕಳನ್ನು ಮಡಿಲಿನಲ್ಲಿ ಎತ್ತಿಕೊಂಡಿದ್ದರು. ಅವರ ಬಳಿ ಪ್ರಾಮ್ ಇತ್ತು.

ನೀನಾ ಮತ್ತು ಆದಿತ್ಯ ಒಂದೇ ಶಾಲೆಯಲ್ಲಿ ಓದುತ್ತಿದ್ದರು. ಅವರ ಶಾಲೆಯ ಭಾವಚಿತ್ರಗಳೂ ಇದ್ದವು. ಇಬ್ಬರೂ ಮುಗ್ಧ ಮಕ್ಕಳಿಂದ ಕ್ರಮವಾಗಿ ದೊಡ್ಡವರಾಗುತ್ತಾ, ವಯಸ್ಕರಾದ ನಂತರದ ಅವರ ಚಿತ್ರಗಳಿದ್ದವು. ಅವರ ವಯಸ್ಸಿನ ಪ್ರತಿಯೊಂದು ಹಂತದ ಭಾವಚಿತ್ರಗಳು ಸಹ ಇದ್ದವು. ನೀನಾಳ ತಂದೆತಾಯಿಯ ಮನೆಯಲ್ಲಿ ಯಾವುದೇ ಸಮಾರಂಭ ನಡೆದಾಗ ಸೀಮಾ ಜೋಶಿ ಜೋಡಿ ಅಲ್ಲಿ ಅವಶ್ಯವಾಗಿ ಕಾಣಬರುತ್ತಿತ್ತು. ಅವರು ಹಳೆಯ ಮಿತ್ರರಾಗಿದ್ದರು. ನೀನಾಳ ತಂದೆ ತಾಯಿಯಂತೆ ಈಗ ಅವರಿಗೂ ವಯಸ್ಸಾಗಿತ್ತು.

ಹಗಲು ಕಳೆಯುತ್ತಿದೆ. ಸೂರ್ಯನಿಂದ ಕಾದ ನೆಲ ತಣ್ಣಗಾಗುತ್ತಿದೆ. ಚಳಿ ಇದೇ ರೀತಿಯಲ್ಲಿ ಹೆಚ್ಚಾದರೆ ನನ್ನನ್ನು ಚಳಿಯಿಂದ ಹೇಗೆ ಪಾರು ಮಾಡಿಕೊಳ್ಳುವುದು? ಆ ವೃದ್ಧನಿಗೆ ನನ್ನ ಸ್ವೆಟರ್ ಕೊಟ್ಟಿದ್ದು ಕೆಡುಕೆನಿಸಿತು. ಆದರೆ ನನ್ನ ಬ್ಯಾಗಿನಲ್ಲಿ ಒಂದು ಬೆಚ್ಚನೆಯ ಶಾಲ್ ಇರುವುದು ನೆನಪಿಗೆ ಬರುತ್ತದೆ. ಚಳಿ ಹೆಚ್ಚಾದರೆ ನನ್ನ ಶಾಲನ್ನು ಹೊದ್ದುಕೊಳ್ಳುತ್ತೇನೆ. ಅಮೇನ್, ಎಲ್ಲಾ ವ್ಯವಸ್ಥೆಗಳೂ ನನ್ನ ಬಳಿಯಿವೆ. ನಿನ್ನ ಗುರಿಯೆಡೆಗೆ ಮುನ್ನಡೆ...

## ಐವಿಎಫ್ - ದುಬಾರಿ ಮತ್ತು ಆಯಾಸದ ಪ್ರಕ್ರಿಯೆ

ಪತಿ ಪತ್ನಿಯ ಸಂಬಂಧಗಳ ಸಾರ್ಥಕತೆ ಮತ್ತು ವೈವಾಹಿಕ ಜೀವನದ ಪೂರ್ಣತ್ವ ಸಂತಾನ ಸುಖದಲ್ಲಿದೆ. ಮಕ್ಕಳು ತಮ್ಮ ತಂದೆ ತಾಯಿಯ ಪರಸ್ಪರರ ಪ್ರೀತಿಯ 'ಸಾಕ್ಷಾತ್ ಪರಿಣಾಮ' ಹಾಗೂ ಇಬ್ಬರ ಪ್ರೀತಿಯ ವಿಸ್ತಾರ ಮತ್ತು 'ಫಲ'ಗಳಾಗಿರುತ್ತಾರೆ. ಈ ಫಲದ ಪ್ರಾಪ್ತಿಯನ್ನು ಪಡೆಯಲು ನಾನು ಮತ್ತು ನೀನಾ ಬಯಸುತ್ತಿದ್ದೆವು. ನಮ್ಮ ಇನ್ನೂ ಹುಟ್ಟದ ಭಾವಿ ಮಗುವಿನ ಬಗ್ಗೆ ನಮ್ಮಿಬ್ಬರ ನಮ್ಮದೇ ಆದ ಆಸೆಗಳಿದ್ದವು. ನಾನು ಏಷಿಯನ್ ಯೂರೋಪಿಯನ್ ಗುಣಗಳುಳ್ಳ ವಿಶಿಷ್ಟ ಮಗುವನ್ನು ಬಯಸುತ್ತಿದ್ದೆ. ಅಂದರೆ ನನ್ನ ಮುತ್ತಜ್ಜಿಯ ಜೀನೋಮ್ ಕ್ರೋಮೋಜೋಮ್ ಪ್ರಭಾವವನ್ನು ನನ್ನ ಹೊಸ ಪೀಳಿಗೆಯಲ್ಲಿ ಇನ್ನಷ್ಟು ಗಟ್ಟಿ ಮಾಡಲು ಬಯಸುತ್ತಿದ್ದೆ; ನೀನಾ ಮಗನನ್ನು ಬಯಸುತ್ತಿದ್ದಳು.

'ಗಂಡು ಹುಟ್ಟಿನಿಂದ ಸ್ವತಂತ್ರನಾಗಿರುತ್ತಾನೆ. ಆದರೆ ಹೆಣ್ಣಿನ ಮೇಲೆ ಅನೇಕ ಕಟ್ಟುಪಾಡುಗಳಿರುತ್ತವೆ' ನೀನಾ ನನಗೆ ಹೇಳುತ್ತಿದ್ದಳು.

ತಿಂಗಳುಗಳು ಕಳೆಯುತ್ತಿದ್ದವು. ಅವಳು ಗರ್ಭಿಣಿಯಾಗುವ ಯಾವ ಸಂಕೇತಗಳೂ ಕಾಣಬರುತ್ತಿರಲಿಲ್ಲ. ಎರಡು ವರ್ಷಗಳು ಕಳೆದ ನಂತರ ನಾವು ಕಳವಳಗೊಂಡೆವು. ಪ್ರೆಗ್ನೆಂಟ್ ಆಗಲು ಇಷ್ಟು ಸಮಯ ಬೇಕಿಲ್ಲ. ವೈದ್ಯರ ಬಳಿಗೆ ಹೋಗಿ ನಮ್ಮ ನಮ್ಮ ಶಾರೀರಿಕ ಪರೀಕ್ಷೆಗಳನ್ನು ಮಾಡಿಸಿಕೊಂಡೆವು. ನನಗೆ ಕ್ಲೀನ್‌ಚಿಟ್ ಲಭಿಸಿತು. ಅಲ್ಲದೆ ವೈದ್ಯರು ನನ್ನ ಸ್ಪರ್ಮ್ ಕೌಂಟ್ ಉತ್ತಮವಾಗಿದೆ ಎಂದರು. ಆದರೆ ನೀನಾ ಅನುಮಾನದ ಸುಳಿಗೆ ಸಿಲುಕಿದಳು. ಎರಡು ಮಕ್ಕಳನ್ನು ಹೆತ್ತ ನಂತರ ನೀನಾಳ ಬಂಜೆತನದ ಬಗ್ಗೆ ಸ್ಪಷ್ಟವಾಗಿ ಹೇಳಲಾಗದು ಎಂದು ವೈದ್ಯರು ಹೇಳಿದರು.

(ಸಶೇಷ)